# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು | : ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 871 |
| ಉತ್ತರಿಸಬೇಕಾದ ದಿನಾಂಕ | : 19-08-2025 |
| ಉತ್ತರಿಸಬೇಕಾದ ಸಚಿವರು | : ಮಾನ್ಯ ಮುಖ್ಯಮಂತ್ರಿ |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಸಹಕಾರ ಇಲಾಖೆಯಿಂದ ರೈತರಿಗೆ ಇರುವ ಸಾಲ ಯೋಜನೆಗಳು ಯಾವುವು ಮತ್ತು ರೈತರಿಗೆ ಹಾಕುತ್ತಿರುವ ಬಡ್ಡಿ ಎಷ್ಟು: | ಸಹಕಾರ ಇಲಾಖೆಯಿಂದ ಸಹಕಾರ ಸಂಘಗಳ ಮೂಲಕ ರೈತರಿಗೆ ಈ ಕೆಳಕಂಡ ಬಡ್ಡಿ ಸಹಾಯಧನದ ಸಾಲ ಯೋಜನೆಗಳು ಮತ್ತು ಬಡ್ಡಿ ದರಗಳು ಇರುತ್ತವೆ.<br><br>1) ರೂ. 5.00 ಲಕ್ಷಗಳವರೆಗಿನ ಅಲ್ಪಾವಧಿ ಬೆಳೆ ಸಾಲವನ್ನು ಮತ್ತು ರೂ.2.00 ಲಕ್ಷಗಳವರೆಗೆ ಪಶುಸಂಗೋಪನೆ/ಮೀನುಗಾರಿಕೆ ಉದ್ದೇಶಗಳಿಗೆ ದುಡಿಯುವ ಬಂಡವಾಳದ ಸಾಲವನ್ನು ಶೂನ್ಯ ಬಡ್ಡಿದರದಲ್ಲಿ ವಿತರಿಸುವ ಯೋಜನೆ.<br><br>2) ರೂ.15.00 ಲಕ್ಷಗಳವರೆಗೆ ಮಧ್ಯಮಾವಧಿ/ದೀರ್ಘಾವಧಿ ಕೃಷಿ ಸಾಲಗಳನ್ನು ಶೇ. 3 ರ ಬಡ್ಡಿ ದರದಲ್ಲಿ ವಿತರಿಸುವ ಯೋಜನೆ.<br><br>3) ಸಹಕಾರ ಸಂಘಗಳು ರೈತರು ಬೆಳೆದ ಕೃಷಿ ಉತ್ಪನ್ನಗಳನ್ನು ಗೋದಾಮುಗಳಲ್ಲಿ ಶೇಖರಣೆ ಮಾಡಿ ವಿತರಿಸುವ ಅಡಮಾನ ಸಾಲವನ್ನು ಶೇ.7 ರ ಬಡ್ಡಿ ದರದಲ್ಲಿ ವಿತರಿಸುವ ಯೋಜನೆ.<br><br>4) ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು, ಹಾಸನ, ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳ ಗುಡ್ಡಗಾಡು ಪ್ರದೇಶಗಳ ರೈತರ ಕೃಷಿ ಉತ್ಪನ್ನ ಮತ್ತು ಪರಿಕರಗಳ ಸಾಗಾಣಿಕೆಗೆ ನಾಲ್ಕು ಚಕ್ರದ ಪಿಕ್‌ಅಪ್ ವ್ಯಾನ್ ಖರೀದಿಸಲು ಸಹಕಾರ ಸಂಘಗಳು ಏಳು ಲಕ್ಷ ರೂ.ವರೆಗಿನ ಸಾಲವನ್ನು ಶೇ.4 ರ ಬಡ್ಡಿ ದರದಲ್ಲಿ ವಿತರಿಸುವ ಯೋಜನೆ.<br><br>5) ರೈತರು ತಮ್ಮ ಹಾಗೂ ತಮ್ಮ ನೆರೆಹೊರೆಯ ರೈತರ ಉತ್ಪನ್ನಗಳನ್ನು ಸಂಗ್ರಹಿಸಲು ಅನುವಾಗುವಂತೆ ಗೋದಾಮು ನಿರ್ಮಿಸಲು ಬ್ಯಾಂಕುಗಳು ನೀಡುವ 20 ಲಕ್ಷ ರೂ.ವರೆಗಿನ ಸಾಲಕ್ಕೆ ಸರ್ಕಾರ ಶೇ.7 ರಷ್ಟು ಬಡ್ಡಿ ಸಹಾಯಧನ ನೀಡುವ ಯೋಜನೆ. |

<table>
<tr><td></td><td></td><td>ಸಹಕಾರ ಸಂಘಗಳು ತಮ್ಮ ಬಂಡವಾಳ ಮತ್ತು ಮೇಲಿನ ಹಂತದ ಸಂಸ್ಥೆಗಳು ನೀಡುವ ಪುನರ್ಧನವನ್ನು ಉಪಯೋಗಿಸಿಕೊಂಡು ಸರ್ಕಾರ ನಿಗದಿಪಡಿಸಿದ ಬಡ್ಡಿದರದಲ್ಲಿ ರೈತರಿಗೆ ಸಾಲ ವಿತರಿಸಿ ಸಕಾಲದಲ್ಲಿ ವಸೂಲಾದಲ್ಲಿ ಸರ್ಕಾರದಿಂದ ನಿಯಮಿತ ಪ್ರಮಾಣದ ಬಡ್ಡಿ ಸಹಾಯಧನವನ್ನು ಒದಗಿಸಲಾಗುತ್ತಿದೆ.</td></tr>
<tr><td>ಆ)</td><td>ರಾಜ್ಯದಲ್ಲಿ ಸಹಕಾರಿ ಸಂಘ ಮತ್ತು ಸಹಕಾರಿ ಬ್ಯಾಂಕ್‌ಗಳಿಂದ ಸಾಲ ಪಡೆದು ಹಿಂಪಡಿಸದೆ ಇರುವ ರೈತರ ಸಂಖ್ಯೆ ಎಷ್ಟು ಮತ್ತು ಹಿಂಪಡೆಯಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; (ಸಂಪೂರ್ಣ ಜಿಲ್ಲಾವಾರು ಮಾಹಿತಿ ನೀಡುವುದು)</td><td>ರಾಜ್ಯದಲ್ಲಿ ಸಹಕಾರ ಸಂಘ ಮತ್ತು ಸಹಕಾರ ಬ್ಯಾಂಕ್‌ಗಳಿಂದ ಸಾಲ ಪಡೆದು ದಿ:31-07-2025 ರ ಅಂತ್ಯಕ್ಕೆ ಹಿಂಪಡಿಸದೆ ಇರುವ ರೈತರ ಸಂಖ್ಯೆಯ ವಿವರವು ಈ ಕೆಳಗಿನಂತಿರುತ್ತದೆ.
<table>
<tr><th>ಸಹಕಾರ ಸಂಸ್ಥೆಯ ವಿಧ</th><th>ಸಾಲದ ವಿಧ</th><th>ದಿ.31-07-2025 ಕ್ಕೆ ಸುಸ್ತಿ ಆಗಿರುವ ರೈತರ ಸಂಖ್ಯೆ</th></tr>
<tr><td>ಪ್ಯಾಕ್ಸ್ ಮತ್ತು ಡಿಸಿಸಿ ಬ್ಯಾಂಕ್</td><td>ಅಲ್ಪಾವಧಿ ಕೃಷಿ ಸಾಲ</td><td>1,17,158</td></tr>
<tr><td>ಪ್ಯಾಕ್ಸ್ ಮತ್ತು ಡಿಸಿಸಿ ಬ್ಯಾಂಕ್</td><td>ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲ</td><td>13,900</td></tr>
<tr><td>ಪಿಕಾರ್ಡ್ ಬ್ಯಾಂಕ್</td><td>ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲ</td><td>39,571</td></tr>
<tr><td></td><td>ಒಟ್ಟು</td><td>1,70,629</td></tr>
</table>
ಸುಸ್ತಿಯಾದ ರೈತರ ವಿವರವನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.<br><br>
ಸಾಲ ವಸೂಲಾತಿ ಸಂಬಂಧ ನಿಬಂಧಕರ ಕಛೇರಿಯಿಂದ ದಿ:14-10-2024 ರಂದು ಸುಸ್ತಿಯಾದ ಸಾಲಗಳ ವಸೂಲಾತಿಗಾಗಿ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 70-ಎ ರಲ್ಲಿ ದಾವೆ ದಾಖಲಿಸಲು ಗರಿಷ್ಟ 6 ವರ್ಷಗಳ ಮಿತಿ ಇದ್ದು, ದಾವೆ ದಾಖಲಿಸುವುದು ಅನಿವಾರ್ಯವಾಗಿರುವುದರಿಂದ ಅಲ್ಪಾವಧಿ ಕೃಷಿ ಸಾಲ ಪಡೆದು ಸುಸ್ತಿಯಾದ ರೈತರಿಗೆ ನೋಟೀಸ್ ಗಳನ್ನು ನೀಡದೇ ಮೊದಲ ಹಂತದಲ್ಲಿ ತಿಳುವಳಿಕೆ ಪತ್ರಗಳನ್ನು ಮಾತ್ರ ನೀಡಲು ಹಾಗೂ ನಂತರ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 70 ರಡಿ ದಾವೆ ದಾಖಲಿಸಿ ಅವಾರ್ಡ್ ಪಡೆಯಲು ನಂತರ ಅಮಲ್ಜಾರಿ ಅರ್ಜಿ ದಾಖಲಿಸುವುದು, ಆದರೆ ಆಸ್ತಿ ಹರಾಜು ಪ್ರಕ್ರಿಯೆಯನ್ನು ಕೈಗೊಳ್ಳದಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.</td></tr>
<tr><td>ಇ)</td><td>ಸಹಕಾರಿ ಸಂಘ ಮತ್ತು ಸಹಕಾರಿ ಬ್ಯಾಂಕ್‌ಗಳಿಂದ ಸಾಲ ಪಡೆದು ಹಿಂಪಡಿಸಲಾಗದವರಿಗೆ ಸಾಲ ಮನ್ನಾ ಮಾಡುವ ಬಗ್ಗೆ ಸರ್ಕಾರ ಚಿಂತಿಸಿದೆಯೇ;</td><td>ಸಹಕಾರ ಸಂಘಗಳಲ್ಲಿ ಸುಸ್ತಿಯಾಗಿರುವ ರೈತರ ಪ್ರಮಾಣ ಕಡಿಮೆ ಇದ್ದು, ರೈತರು ಪಡೆದಿರುವ ಕೃಷಿ ಸಾಲವನ್ನು ಮನ್ನಾ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.</td></tr>
</table>

| | | |
|---|---|---|
| ಈ) | ಸಹಕಾರಿ ಸಂಘ ಮತ್ತು ಸಹಕಾರ ಬ್ಯಾಂಕ್‌ಗಳಿಂದ ಸಾಲ ಪಡೆದು ಹಿಂಪಡೆಯಲು ಅವರಿಂದ ಬಡ್ಡಿ ಮನ್ನಾ ಮಾಡಲಾಗುತ್ತಿದೆಯೇ; ಹಾಗಿದ್ದಲ್ಲಿ, ಇಲ್ಲಿಯವರೆಗೆ ಮನ್ನಾ ಮಾಡಿರುವ ಬಡ್ಡಿ ಎಷ್ಟು? (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು) | ಹೌದು, ಕಳೆದ ಎರಡು ವರ್ಷಗಳಲ್ಲಿನ ಬರ ಪರಿಸ್ಥಿತಿಯ ಹಿನ್ನೆಲೆಯಲ್ಲಿ, ರೈತರಿಗೆ ನೆರವಾಗಲು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ದಿನಾಂಕ: 31-12-2023 ಕ್ಕೆ ಸುಸ್ತಿ ಆಗಿದ್ದ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಮತ್ತು ಕೃಷಿ ಸಂಬಂಧಿತ ಸಾಲಗಳ ಕಂತುಗಳ ಅಸಲನ್ನು ಫೆಬ್ರುವರಿ-2024 ರೊಳಗೆ ರೈತರು ಪಾವತಿಸಿದಲ್ಲಿ, ಬಡ್ಡಿಯನ್ನು ಸರ್ಕಾರದಿಂದ ಭರಿಸಲು ಆದೇಶಿಸಿದ್ದು, ಈ ಅವಧಿಯನ್ನು ಮಾರ್ಚ್-2024 ರವರೆಗೆ ವಿಸ್ತರಿಸಲಾಗಿತ್ತು.<br><br>ಈ ಯೋಜನೆಯಲ್ಲಿ ರೂ. 239.26 ಕೋಟಿಗಳ ಬಡ್ಡಿ ಮನ್ನಾ ಮಾಡಲಾಗಿದೆ.<br><br>ಜಿಲ್ಲಾವಾರು ವಿವರವನ್ನು **ಅನುಬಂಧ- 2** ರಲ್ಲಿ ನೀಡಲಾಗಿದೆ. |

**ಕಡತ ಸಂಖ್ಯೆ: ಸಿಒ 224 ಸಿಎಲ್ಎಸ್ 2025**

ಸಿದ್ದರಾಮಯ್ಯ

**(ಸಿದ್ದರಾಮಯ್ಯ)**

ಮುಖ್ಯಮಂತ್ರಿ

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ. ಸುನೀಲ್ ವಲ್ಯಾಪುರ್ ( ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 871 ಕ್ಕೆ ಅನುಬಂಧ-1**

**ರಾಜ್ಯದಲ್ಲಿ ಸಹಕಾರ ಸಂಘ ಮತ್ತು ಸಹಕಾರ ಬ್ಯಾಂಕ್‌ಗಳಿಂದ ಸಾಲ ಪಡೆದು ದಿ.31-7-2025 ರ ಅಂತ್ಯಕ್ಕೆ ಹಿಂಪಡಿಸದೆ ಇರುವ ರೈತರಿಗೆ ಸಂಖ್ಯೆಯ ವಿವರ**

| ಕ್ರ. ಸಂ | ಜಿಲ್ಲೆಯ ಹೆಸರು | ರೈತರ ಸಂಖ್ಯೆ | | |
|---|---|---|---|---|
| | | ಪ್ಯಾಕ್ಸ್ ಮತ್ತು ಡಿಸಿಸಿ ಬ್ಯಾಂಕ್ | | ಪಿಕಾರ್ಡ್ ಬ್ಯಾಂಕ್ |
| | | ಅಲ್ಪಾವಧಿ ಕೃಷಿ ಸಾಲ | ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲ | ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲ |
| 1 | ಬಾಗಲಕೋಟೆ | 2620 | 18 | 458 |
| 2 | ಬೆಳಗಾವಿ | 1687 | 5 | 1585 |
| 3 | ಬೆಂಗಳೂರು ಗ್ರಾಮಾಂತರ | 35 | 5 | 529 |
| 4 | ಬೆಂಗಳೂರು ದಕ್ಷಿಣ | 471 | 66 | 0 |
| 5 | ಬೆಂಗಳುರು ನಗರ | 24 | 1 | 156 |
| 6 | ವಿಜಯನಗರ | 4763 | 205 | 0 |
| 7 | ವಿಜಯಪುರ | 9219 | 173 | 1572 |
| 8 | ಬಳ್ಳಾರಿ | 1766 | 46 | 670 |
| 9 | ಬೀದರ | 6633 | 2345 | 999 |
| 10 | ಶಿವಮೊಗ್ಗ | 1972 | 18 | 2219 |
| 11 | ಮಂಡ್ಯ | 4850 | 145 | 3146 |
| 12 | ಮೈಸೂರು | 6676 | 1011 | 1239 |
| 13 | ಯಾದಗಿರ | 6236 | 29 | 214 |
| 14 | ಚಿಕ್ಕಬಳ್ಳಾಪುರ | 3586 | 719 | 1621 |
| 15 | ಚಿಕ್ಕಮಗಳೂರು | 155 | 77 | 1784 |
| 16 | ಚಿತ್ರದುರ್ಗ | 5383 | 224 | 1541 |
| 17 | ರಾಯಚೂರು | 3922 | 26 | 1952 |
| 18 | ಉಡುಪಿ | 226 | 308 | 1559 |
| 19 | ಉತ್ತರ ಕನ್ನಡ | 5751 | 2479 | 726 |
| 20 | ಹಾಸನ | 20 | 15 | 5560 |
| 21 | ಹಾವೇರಿ | 2165 | 28 | 685 |
| 22 | ಕಲಬುರಗಿ | 29819 | 569 | 1096 |
| 23 | ಕೊಪ್ಪಳ | 965 | 8 | 928 |
| 24 | ಕೋಲಾರ | 2481 | 3866 | 895 |
| 25 | ಕೊಡಗು | 524 | 49 | 272 |
| 26 | ಗದಗ | 3470 | 46 | 1029 |
| 27 | ತುಮಕೂರು | 4860 | 82 | 2219 |
| 28 | ಚಾಮರಾಜನಗರ | 2553 | 210 | 1549 |
| 29 | ದಾವಣಗೆರೆ | 2008 | 47 | 1482 |
| 30 | ದಕ್ಷಿಣ ಕನ್ನಡ | 733 | 1075 | 1376 |
| 31 | ಧಾರವಾಡ | 1585 | 5 | 510 |
| | ಒಟ್ಟು | 117158 | 13900 | 39571 |

ಸಹಕಾರ ಸಂಘಗಳ ಅಪರ ನಿಬಂಧಕರು
(ಪತ್ತು)

13/8/25

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ. ಸುನೀಲ್ ವಲ್ಯಾಪುರ್ ( ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು )
ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 871 ಕ್ಕೆ ಅನುಬಂಧ-2

ರಾಜ್ಯದಲ್ಲಿ ಕೃಷಿ ಪತ್ತಿನ ಸಹಕಾರ ಸಂಘಗಳ ಸುಸ್ತಿಯಾಗಿದ್ದ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಮತ್ತು ಕೃಷಿ ಸಂಬಂಧಿತ ಸಾಲಗಳ ಕಂತುಗಳನ್ನು ಮರುಪಾವತಿಸಿ ಬಡ್ಡಿ ಮನ್ನಾ ಪ್ರಯೋಜನೆ ಪಡೆದ ರೈತರ ಸಂಖ್ಯೆ ಮತ್ತು ಮೊತ್ತದ ವಿವರ

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ಜಿಲ್ಲೆಯ ಹೆಸರು | ರೈತರ ಸಂಖ್ಯೆ | ಸುಸ್ತಿ ಅಸಲು ಮರುಪಾವತಿಸಿದ ಮೊತ್ತ | ಬಡ್ಡಿ ಮನ್ನಾ ಮೊತ್ತ |
|---|---|---|---|---|
| 1 | ಬಾಲಗಕೋಟೆ | 261 | 573.48 | 272.08 |
| 2 | ಬೆಂಗಳೂರು ಗ್ರಾ | 54 | 118.55 | 66.08 |
| 3 | ಬೆಂಗಳೂರು ನಗರ | 126 | 70.74 | 33.26 |
| 4 | ಬೆಳಗಾವಿ | 49 | 27.53 | 18.90 |
| 5 | ಬಳ್ಳಾರಿ | 283 | 519.83 | 323.48 |
| 6 | ಬೀದರ್ | 3633 | 3383.30 | 2753.40 |
| 7 | ಚಾಮರಾಜನಗರ | 138 | 102.38 | 62.34 |
| 8 | ಚಿಕ್ಕಮಗಳೂರು | 78 | 227.21 | 158.80 |
| 9 | ಚಿತ್ರದುರ್ಗ | 114 | 252.86 | 98.04 |
| 10 | ದಾವಣಗೆರೆ | 26 | 35.48 | 12.40 |
| 11 | ಧಾರವಾಡ | 12 | 16.96 | 14.09 |
| 12 | ಗದಗ | 36 | 51.37 | 20.44 |
| 13 | ಹಾಸನ | 73 | 136.89 | 115.27 |
| 14 | ಹಾವೇರಿ | 11 | 4.57 | 2.04 |
| 15 | ಕಲಬುರ್ಗಿ | 464 | 1576.07 | 1643.77 |
| 16 | ಕೊಡಗು | 50 | 73.67 | 36.83 |
| 17 | ಕೋಲಾರ ಮತ್ತು ಚಿಕ್ಕಬಳ್ಳಾಪುರ | 801 | 932.20 | 328.05 |
| 18 | ಕೊಪ್ಪಳ | 11 | 22.43 | 16.21 |
| 19 | ಮಂಡ್ಯ | 308 | 191.48 | 96.43 |
| 20 | ಮೈಸೂರು | 656 | 537.96 | 275.96 |
| 21 | ರಾಯಚೂರು | 89 | 162.54 | 118.27 |
| 22 | ರಾಮನಗರ | 33 | 115.71 | 40.85 |
| 23 | ಶಿವಮೊಗ್ಗ | 144 | 560.10 | 255.27 |
| 24 | ದಕ್ಷಿಣ ಕನ್ನಡ | 1265 | 909.08 | 695.95 |
| 25 | ತುಮಕೂರು | 122 | 641.91 | 358.50 |
| 26 | ಉಡುಪಿ | 491 | 322.10 | 198.74 |
| 27 | ಉತ್ತರ ಕನ್ನಡ | 1493 | 955.94 | 551.60 |
| 28 | ವಿಜಯಪುರ | 401 | 714.96 | 312.38 |
| 29 | ಯಾದಗಿರಿ | 64 | 236.11 | 219.13 |
| 30 | ಬೆಂಗಳೂರು (ಕಸ್ಕಾರ್ಡ್ ಬ್ಯಾಂಕ್) | 24860 | 15324.66 | 14827.81 |
|  | ಒಟ್ಟು | **36146** | **28798.08** | **23926.36** |

ಸಹಕಾರ ಸಂಘಗಳ ಅಪರ ನಿಬಂಧಕರು
(ಪತ್ತು)